ಶ್ರೀ ಮುನೀಶ್ವರ ಮಹಾಗಣಪತಿ ಮಹಿಮೆ



ಪೋಲೀಸ್ ಲೈನ್ ಮಂಗಳೂರು

ಶ್ರೀ ಮುನೀಶ್ವರ ಮಹಾಗಣಪತಿ ಮಹಿಮೆ

ಲೇಖಕ: **ಕೆ. ಆರ್. ನಾಥ್.**

ಪ್ರ ಕಾ ಶ ಕ ರು :

ನಾಥ್ ಎಂಟರ್‌ಪ್ರೈಸಸ್

ಬಸಂತ್ ಸ್ಟುಡಿಯೊ, ಕುಂದಾಪುರ.

ಶ್ರೀ ಮುನೀಶ್ವರ ಮಹಾಗಣಪತಿಕ್ಷೇತ್ರ.

ಪೋಲೀಸ್ ಲೈನ್, ಮಂಗಳೂರು.

ಸ್ಥಾಪನೆ: **1928.**

ಪ್ರಥಮ ಮುದ್ರಣ: 1977 ಅಗಸ್ಟ್.

ಲೇಖಕ: ಕೆ. ಆರ್. ನಾಥ್

ಪ್ರಕಾಶಕರು: ನಾಥ್ ಎಂಟರ್ ಪ್ರೈಸಸ್.
ಬಸಂತ್ ಸ್ಟುಡಿಯೊ.
ಕುಂದಾಪುರ, ದ. ಕ.
PHONE. 229

ಮುದ್ರಕರು: ವಿಜಯ ಪ್ರಿಂಟರ್ಸ್, ಕುಂದಾಪುರ.


Sri Munishwara Mahaganapathi Mahime.

written by **K. R. NATH**

Publised by NATH ENTERPRISES.
Basanth Studio
COONDAPOOR

ಬೆಲೆ ರೂ. 2-00

ಅರ್ಪಣೆ



ಧಾರ್ಮಿಕ, ಸಾಮಾಜಿಕ, ಸಾಹಿತ್ಯಿಕ ಕಲಾರಂಗಕ್ಕೆ ಅಪಾರ ಪ್ರೋತ್ಸಾಹಕೊಡು
ತ್ತಿರುವ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿಯವರಾದ ಶ್ರೀ
ಡಿ. ವಿರೇಂದ್ರ ಹೆಗ್ಗಡೆಯವರಿಗೆ
ಭಕ್ತಿಪೂರ್ವಕವಾಗಿ ಈ ಕೃತಿಯನ್ನು ಅರ್ಪಿಸುತ್ತೇನೆ.

–ಕೆ. ಆರ್. ನಾಥ್.

ಶ್ರೀ ಡಿ. ವಿರೇಂದ್ರ ಹೆಗ್ಗಡೆಯವರ

"ನುಡಿ ಮುತ್ತುಗಳು"

॥ ಪರೋಕ್ಷದಲ್ಲಿ ಯಾರನ್ನೂ ನಿಂದಿಸದೆ, ಪ್ರತ್ಯಕ್ಷದಲ್ಲಿ ಕಲಹ ವರ್ಧಕಗಳಾದ ಮಾತನ್ನಾಡದೆ, ಇತರರಿಗೆ ಪೀಡೆಯಾಗುವಂಥ ಭಾಷೆಯನ್ನು ಬಳಸದವರು ಅವರೇ ಪೂಜ್ಯರು ॥

॥ಬಾಲಕ, ವೃದ್ಧ ಸ್ತ್ರೀ, ಪುರುಷ, ಸಾಧು-ಗೃಹಸ್ಥ, ಇವರಲ್ಲಿ ಯಾರಿಗೂ ಅವಮಾನ ಮಾಡದೆ, ಯಾರನ್ನೂ ತಿರಸ್ಕರಿಸದೆ, ಕ್ರೋಧವನ್ನು, ಅಭಿಮಾನವನ್ನು ಯಾರೂ ಪೂರ್ಣವಾಗಿ ಪರಿತ್ಯಾಗ ಮಾಡುತ್ತಾರೋ ಅವರೇ ಪೂಜ್ಯರು ॥

॥ ಸಮತಾ ಭಾವದಿಂದ ಶ್ರಮಣನಾಗುತ್ತಾನೆ. ಬ್ರಹ್ಮಚರ್ಯದಿಂದ ಬ್ರಾಹ್ಮಣನಾಗುತ್ತಾನೆ. ಜ್ಞಾನದಿಂದ ಮುನಿಯಾಗುತ್ತಾನೆ. ತಪದಿಂದ ತಪಸ್ವಿಯಾಗುತ್ತಾನೆ. ॥

॥ ಎಲ್ಲಾ ಜೀವಗಳನ್ನು ತನ್ನಂತೆಯೇ ತಿಳಿಯುವವನಿಗೂ, ತನ್ನನ್ನೂ, ಇತರರನ್ನೂ, ಸಮಾನ ದೃಷ್ಟಿಯಿಂದ ನೋಡುವವನಿಗೂ ಚಂಚಲವಾದ ಇಂದ್ರಿಯಗಳನ್ನು ದಮನ ಮಾಡಿದವನಿಗೂ, ಪಾಪಕರ್ಮವು ಬಂಧವಾಗುವುದಿಲ್ಲ. ॥

॥ ಒಂದು ವೇಳೆ ತನ್ನಿಂದ ಅಧಿಕ ಗುಣಗಳುಳ್ಳ ಅಥವಾ ಸಮಾನ ಗುಣಗಳುಳ್ಳ ಸಂಗಡಿಗನು ಸಿಕ್ಕದೆ ಹೋದರೆ, ಕಾಮ ಭೋಗಗಳಲ್ಲಿ ಸಂಪೂರ್ಣ ಅನಾಸಕ್ತನಾಗಿದ್ದು ಒಬ್ಬನೇ ತಿರುಗಬೇಕು. ಆದರೆ ಎಂದೂ ಮರೆತು ದುರಾಚಾರಿಯ ಸಂಗವನ್ನು ಮಾಡಬಾರದು. ॥

॥ ಪಾಪಗಳಲ್ಲಿ ಮೂರು ವಿಧ (1) ತಾನಾಗಿ ಮಾಡುವುದು. (2) ಇನ್ನೊಬ್ಬರಿಂದ ಮಾಡಿಸುವುದು. (3) ಇನ್ನೊಬ್ಬರು ಮಾಡಿದುದನ್ನು ಅನು ಮೋದಿಸುವುದು. ಪುಣ್ಯಗಳಲ್ಲಿಯೂ ಹೀಗೆಯೇ......॥

॥ ಬಾಯಿ ಮಾತಿನ ಚಾತುರ್ಯದಿಂದ ಯಾವ ಲಾಭವೂ ಇಲ್ಲ. ಅಂತ ರಂಗ ಪರಿಣಾಮಗಳನ್ನು ನಿರ್ಮಲವಾಗಿ ಮಾಡಿಕೊಳ್ಳುವುದೇ ಶ್ರೇಯಸ್ಕರ ವಾದುದು. ॥

॥ ಜ್ಞಾನವು ಸಂಪೂರ್ಣ ವಿಶ್ವದ ರಹಸ್ಯಗಳನ್ನೆಲ್ಲಾ ತಿಳಿಸುವ ಶಕ್ತಿ ಯುಳ್ಳದ್ದಾಗಿರುತ್ತದೆ. ಜ್ಞಾನದ ಮೂಲಕ ಕರ್ತವ್ಯದ ಅರಿವಾಗುತ್ತದೆ. ಜ್ಞಾನ ಹಾಗೂ ಕರ್ತವ್ಯಗಳ ಸಾಧನೆಯಿಂದಲೇ ದುಃಖದ ನಾಶವಾಗುತ್ತದೆ. ॥

॥ ಸತತ ಭಗವನ್ ನಾಮಸ್ಮರಣೆ, ಸತ್ಸಂಗ ಆಚಾರ ವಿಚಾರಗಳಲ್ಲಿ ಉತ್ತಮ ನಡವಳಿಕೆ ಪರಮಾನಂದವನ್ನು ಕೊಡುತ್ತದೆ ಮತ್ತು ಮುಕ್ತಿಗೆ ಕಾರಣವಾಗುತ್ತದೆ. ॥

॥ ಕಷ್ಟಗಳು ಮನಸ್ಸಿನ ಕಶ್ಮಲಗಳನ್ನು ದೂರ ಮಾಡುತ್ತವೆ. ಸ್ಥೈರ್ಯ ವನ್ನು ಸಂಯಮವನ್ನು ಕೊಟ್ಟು ಇಚ್ಛಾ ಶಕ್ತಿಯನ್ನು, ಸಹನಾಶಕ್ತಿಯನ್ನು ಹೆಚ್ಚಿಸುತ್ತದೆ. ಆದುದರಿಂದ ಕಷ್ಟಗಳು ಮಾರು ವೇಶದಲ್ಲಿ ಬರುವ ಅನು ಗ್ರಹವೆಂದೇ ತಿಳಿಯಬೇಕು. ॥

॥ ನಾನು ಇಂತವನು ಶ್ರೀಮಂತ, ಜ್ಞಾನಿ, ಅಧಿಕಾರಿ, ನೌಕರ, ಕೂಲಿ ಮುಂತಾದ ಭಾವನೆಗಳು ಅಹಂಕಾರದ ಮೂಲಗಳು. ಇವುಗಳು ಮನಸ್ಸನ್ನು ಕೆಡಿಸಿ ಸದಾ ಭ್ರಮಿತನನ್ನಾಗಿ ಮಾಡುತ್ತದೆ. ॥

ಶ್ರೀ ಮುನೀಶ್ವರ ಮಹಾಗಣಪತಿ ಕ್ಷೇತ್ರ ಮಹಿಮೆ

ಅನಂತವು ಸಾಗರದಂತೆ ಅತೀವ ವಿಶಾಲವೂ ಗಹನವೂ ಆಗಿರುವ ಹಿಂದೂ ತತ್ವ ಸಂಹಿತೆಗಳಲ್ಲಿ ಹೇಳಿರುವ ಕ್ಷೇತ್ರ ತೀರ್ಥಾದಿ ಸೇವಾ ಪದ್ಧತಿಗಳ ಸೂಕ್ಷ್ಮ ವಿಚಾರವು, ನಿವೃತ್ತಿ ಮಾರ್ಗ ತತ್ಪರರಿಗೂ, ಸ್ಥೂಲಾರ್ಥ ವಿಚಾರವು, ಪ್ರವೃತ್ತಿ ಮಾರ್ಗ ತತ್ಪರರಿಗೂ, ಒಂದೇ ರೀತಿಯಲ್ಲಿ ಮಾರ್ಗದರ್ಶನ ಮಾಡುತ್ತಿದೆ; ಎಂಬುದು ಕೇವಲ ಪರಮಾರ್ಥವು. ಆದರೆ ಸುಪ್ರಸಿದ್ಧ ಪುಣ್ಯ ಕ್ಷೇತ್ರವು ಆದ ಋಷಿಕೇಷ, ಹರಿದ್ವಾರ, ದ್ವಾರಕೆ, ಅಯೋಧ್ಯೆ, ಬನಾರಸ್, ಮೊದಲಾದ ತೀರ್ಥಾಟನದ ಕೇಂದ್ರಗಳಲ್ಲಿ ಹೋಗಿ ನೋಡುವವರಿಗೆ, ನಾಮ ಮಾತ್ರವಾದ ಕ್ಷೇತ್ರಗಳನ್ನು ಮಾತ್ರವೇ ಅಲ್ಲಿ ನೋಡಬಹುದು. ಆದರೆ ತಿರುಪತಿ, ಚಿದಂಬರ, ಅನಂತ, ಪದ್ಮನಾಭ, ಕನ್ಯಾಕುಮಾರಿ, ಬೇಲೂರು - ಹಳೆಬೀಡು ಮೊದಲಾದ ದಕ್ಷಿಣ ದೇಶಗಳ ದೇವಸ್ಥಾನಗಳಲ್ಲಿರುವ ಹಿರಿಮೆ ಅಥವಾ ಶಿಲ್ಪಕಲಾ ಚಾತುರ್ಯಗಳು ಅವುಗಳಿಗಿರುವುದಿಲ್ಲ. ಹೀಗಾಗಿ ಉತ್ತರ ದೇಶವು ತೀರ್ಥಾಟನಕ್ಕೆ ಹಾಗೂ ದಕ್ಷಿಣ ದೇಶವು ಪೂಜಾರಾಧನೆಗೂ ಹೆಚ್ಚಿನ ಪ್ರಾಧಾನ್ಯವನ್ನು ಕಲ್ಪಿಸಿದೆ. ಅದರಲ್ಲೂ ಪರಶುರಾಮ ಸೃಷ್ಟಿಯ ಕ್ಷೇತ್ರವು ಇನ್ನು ವಿಶಿಷ್ಟ ಮತ್ತು ವಿಭಿನ್ನವಾಗಿದೆ.

ಎಲ್ಲಾ ಶಿವಾಲಯಗಳಲ್ಲೂ ನೀವು ಶಿವಲಿಂಗದ ಆರಾಧನೆ ಮಾತ್ರ ಕಂಡಿರಬಹುದು. ಆದರೆ ಈ ಮುನೀಶ್ವರ ಮಹಾಗಣಪತಿ ದೇವಾಲಯದಲ್ಲಿ ಮುನಿವರ್ಯರ ರೂಪದಲ್ಲಿ ತಪಸ್ಸನ್ನು ಆಚರಿಸುವ ಶಿವ ಮೂರ್ತಿಯನ್ನೂ ಹಾಗೂ ಪಾಣ ಪೀಠದಲ್ಲಿರಿಸಿದಂತಹ ಗಣಪತಿ ಮೂರ್ತಿಯನ್ನೂ ಪ್ರತ್ಯಕ್ಷವಾಗಿ ಈಗಲೂ ನೀವು ನೋಡಬಹುದು. ಇದು ಇಲ್ಲಿಯ ವಿಶೇಷ.

ಮೂಲ ಇತಿಹಾಸ

ಬ್ರಹ್ಮೋತ್ತರ ಖಂಡದಲ್ಲಿ ಹೇಳಿರುವಂತಹ ಬ್ರಹ್ಮಕಪಾಲ ಕಥೆಗೆ ಸಂಬಂಧಿಸಿದಂತೆ, ಬ್ರಹ್ಮನು ಸೃಷ್ಟಿಕರ್ತನಾಗಿದ್ದು, ಶಾರದೆಯನ್ನು ಸೃಷ್ಟಿಸುತ್ತಾನೆ, ಆಕೆಯ ರೂಪಲಾವಣ್ಯಕ್ಕೆ ಮಾರು ಹೋಗಿ ತನ್ನ ಪುತ್ರಿಯೇ ಆಗಿರುವ ಶಾರದೆಯನ್ನು ವರಿಸುತ್ತಾನೆ, ಈ ವಿಷಯವನ್ನು ನಾರದ ಮಹರ್ಷಿಗಳು ಲಯಕರ್ತನಾದ ಈಶ್ವರನಿಗೆ ತಿಳಿಸುತ್ತಾರೆ. ಇದರಿಂದ ಕುಪಿತನಾದ ಈಶ್ವರನು ತನ್ನಲ್ಲಿ ಉಂಟಾದ ರೋಷವನ್ನು ತಾಳಲಾರದೆ ಪಂಚ ಮುಖಿಯಾಗಿದ್ದ ಬ್ರಹ್ಮನ ಒಂದು ಮುಖವನ್ನು ಸೆಳೆದಾಗ, ಅದು ಬಲವಂತವಾಗಿ ಶಿವನ ಹಸ್ತಕ್ಕೆ ಬಿಗಿಯಾಗಿ ಅಂಟಿಕೊಳ್ಳುತ್ತದೆ.

ಯಾರನ್ನು ಬಿಡದ ಶನಿ ಶಿವನನ್ನೂ ವಶಪಡಿಸಿಕೊಳ್ಳಲು ಅದುವರೆಗೂ ಕಾದಿದ್ದವನು, ತತ್ಸಮಯದಲ್ಲಿ ಶಿವನ ಬೆನ್ನು ಹತ್ತಿದನು. ಅಂದಿನಿಂದ ಶಿವನು, ಅಲೆಮಾರಿಯಾಗಿ ಊರು ಊರು ಬಿಕ್ಷೆ ಬೇಡುತ್ತಾ ಅಲೆಯುತ್ತಿದ್ದನು ಕ್ರಮೇಣ ತನ್ನದೇ ತಾಂಡವ ನೃತ್ಯವಾಡುವ ಕಾರ್ಯ ಕ್ಷೇತ್ರವಾದ ರುದ್ರ ಭೂಮಿಯಲ್ಲಿ ಮುನಿರೂಪದಲ್ಲಿ ತಪಸ್ಸು ಕೈಗೊಂಡನು. ಆ ಪುಣ್ಯ ಕ್ಷೇತ್ರದಲ್ಲಿ ಹೊಸ ದೈವೀಕಳೆ ತೇಜಸ್ಸು ಉಂಟಾಗಿ "ಮುನೀಶ್ವರಾಶ್ರಮ" ಎಂದು ಪ್ರಸಿದ್ಧಿಗೊಂಡಿತು.

ಇಪ್ಪತ್ತೇಳು ಲಕ್ಷ ಗಣಗಳ ನಾಯಕನಾದ ವಿಘ್ನನಾಶಕ ವಿನಾಯಕನು, ತಂದೆಯಾದ ಈಶ್ವರನ ಸಾನ್ನಿಧ್ಯದಲ್ಲೇ ಬೆಳೆಯಬೇಕೆಂಬ ಕುತೂಹಲದಿಂದ ತನ್ನ ಗಣಗಳ ಸಮೇತವಾಗಿ ಸದ್ರಿಕ್ಷೇತ್ರಕ್ಕೆ ಆಗಮಿಸಲು ಇಚ್ಛಿಸಿದನು. ಸದ್ರಿ ಕ್ಷೇತ್ರದಲ್ಲಿ ತನ್ನದೇ ಆದ ಒಂದು ವೈಶಿಷ್ಟ್ಯವನ್ನು ತೋರಿಸುವ ದೃಷ್ಟಿಯಿಂದ, ತನ್ನ ತಂದೆ ತಪಸ್ಸನ್ನು ಆಚರಿಸಿದ ಆಲದ ಮರದ ಗರ್ಭದಿಂದ ತನ್ನ ಸೊಂಡಿಲನ್ನು ಹೊರಕ್ಕೆ ಹಾಕಿ ಉದ್ಭವಿಸಿದನು. ಇದರಿಂದಾಗಿ ಸದ್ರಿ ಕ್ಷೇತ್ರದಲ್ಲಿ ಮಹಾಗಣಪತಿಯ ಪ್ರತಿಷ್ಠೆಗೂ ಕಾರಣವಾಯಿತು.

* * *



ಶ್ರೀ ಮುನೀಶ್ವರ ಮಹಾಗಣಪತಿ ದೇವರು.



ಶ್ರೀ ಮುನೀಶ್ವರ ದೇವರು

ಸ್ಥಳ ಮಹಿಮೆ

ಒಂದೆಡೆ ಅರಣ್ಯ ಪ್ರದೇಶವೂ, ಇನ್ನೊಂದೆಡೆ ವಿಶಾಲ ಮೈದಾನ ಪ್ರದೇಶ ಹಾಗೂ ಸ್ಮಶಾನ ಕಾಳಿ, ಸ್ಮಶಾನ ದೇವತೆಗಳಿಂದ ಕೂಡಿದ ರುದ್ರ ಭೂಮಿ ಒತ್ತೊಟ್ಟಾಗಿ ಇದ್ದು, ಕಾಡು ಮೃಗಗಳಾದ ಹುಲಿ, ಸಿಂಹಗಳ ತವರೂರಾಗಿ ಅನಾದಿ ಕಾಲದಿಂದಲೂ ಹಾಗೆಯೇ ಇತ್ತು. ಮಹಾಭಾರತದಲ್ಲಿ ಹೇಳಿದಂತೆ ಪಾಂಡವರು ವನವಾಸಕ್ಕೆಂದು ಹಸ್ತಿನಾವತಿಯನ್ನು ಬಿಟ್ಟು ಊರು ಊರು ಸಂಚರಿಸಿದರು. ಇದಕ್ಕೆ ಸಾಕ್ಷಿ ಮಂಗಳೂರಿನ ಕದ್ರಿ ಗುಡ್ಡೆಯಲ್ಲಿ ಕಾಣ ಸಿಗುವ ಪಾಂಡವರ ಗುಹೆ ಒಂದಾದರೆ. ಹಾಲೀ ಈಗ ಇರುವ ಮುನೀಶ್ವರ ಮಹಾಗಣಪತಿ ದೇವಸ್ಥಾನದಿಂದ ಒಂದು ಫರ್ಲಾಂಗ್ ದೂರದಲ್ಲಿರುವ ದ್ರೌಪದಿ ಅಮ್ಮನ ದೇವಸ್ಥಾನ ಎರಡನೇ ಸಾಕ್ಷಿ. ಬೆಂಗಳೂರಿನಲ್ಲಿರುವ ದ್ರೌಪದಿ ಅಮ್ಮನ ದೇವಸ್ಥಾನ ಬಿಟ್ಟರೆ ಇದುವೇ ನಮ್ಮ ರಾಜ್ಯದಲ್ಲಿ ಎರಡನೇಯದು, ಆದರೆ ಹಾಲೀ ಈಗ ಅದನ್ನು ಮಹಾಕಾಳೀ ಅಥವಾ ದೇವಿ ದೇವಸ್ಥಾನವೆಂತಲೂ ಅನ್ನುತ್ತಾರೆ. ಪೂಜೆ ಪುರಸ್ಕಾರಗಳಲ್ಲಿ ಈ ಎರಡು ದೇವಸ್ಥಾನಗಳಿಗೂ ಸಂಬಂಧವಿದೆ. ಆದರೆ ಹಾಲೀ ಈಗ ಈ ಮಹಾಕಾಳಿ ದೇವಸ್ಥಾನವು ಒಂದು ಸಮಾಜದವರ ಸ್ವಾಧೀನತೆಯಲ್ಲಿದ್ದು ಯಾವುದೇ ಅಭಿವೃದ್ಧಿ ಇಲ್ಲದೆ ಖಾಸಗಿ ದೇವಾಲಯದಂತಾಗಿದೆ. ಇದು ಶೋಚನೀಯ ಈ ದೇವಾಲಯದ ಒತ್ತಿನಲ್ಲೇ ಬಲ ಪಾರ್ಶ್ವಕ್ಕೆ ತಾಗಿ ಮುಸ್ಲಿಂರ ಮಸೀದಿ ಇದೆ. ಆದುದರಿಂದ ಹಿಂದೂ ಮುಸ್ಲಿಂರ ಐಕ್ಯ ಹಾಗೂ ಹೊಂದಾಣಿಕೆಗೆ ಇದೊಂದು ಸಾಂಕೇತಿಕ ಲಕ್ಷಣವಾಗಿದೆ. ಅಲ್ಲದೆ 1750ರಿಂದ 1800ರ ಇಸ್ವಿಯ ತನಕ ಹಿಂದೂ ಮುಸ್ಲಿಂರು ಮಹಾಕಾಳಿಗೆ ಪ್ರಾಣಿ ಬಲಿ ಕೊಡುವ ರೂಢಿಯಿತ್ತು. ಈ ಕ್ಷೇತ್ರದ ವಠಾರದಲ್ಲೇ "ಮುತ್ತಪ್ಪ ತಿರುವಪ್ಪನ್ ವೆಳ್ಳಾಟ" ಉತ್ಸವವೂ, ಅಯಪ್ಪನ್ ಸ್ವಾಮಿ ಉತ್ಸವವು, ಪ್ರತಿ ವರ್ಷವೂ ನಡೆಯುತ್ತವೆ. ಅಲ್ಲದೆ ಪಕ್ಕದಲ್ಲಿರುವ ಪೋಲೀಸು ಕಛೇರಿಗೆ ತಾಗಿದ್ದ ಮಾವಿನ ಮರದ ಬುಡದಲ್ಲಿದ್ದ ಸಮಾಧಿ; "ಸೈದಾಬೀಬಿ"ಯ ಮುಸ್ಲಿಂಮತ

ಮಾಕ್ಕಾನ್ ಇನ್ನೂ ಕಾರ್ಣಿಕವಾಗಿದೆ. ಈ ಎಲ್ಲಾ ಭೂತ ಪ್ರೇತಗಳು, ಗ ರಾಶಿಗಳು ಶ್ರೀ ಮುನೀಶ್ವರ ಮಹಾಗಣಪತಿಯ ಸೇವಕರು ಎಂದು ರುಜು ವಾತಾಗುತ್ತವೆ. ಇವೆಲ್ಲಾ ಉತ್ಸವ ಪೂಜಾ ವಿಧಿಗಳು ಹಿಂದೂ ಮುಸ್ಲಿ ರನ್ನು ಒಂದುಗೂಡಿಸುತ್ತವೆ. ಇವು ವಿಶೇಷ.


ಆಲದ ಗರ್ಭದ ಹಿರಿಮೆ ಮತ್ತು ನಡೆದು ಬಂದ ದಾ

ಪೋಲೀಸರು ನಾಸ್ತಿಕರೇ? ಅಲ್ಲ ಅವರೂ ಆಸ್ತಿಕರು. ದೈವ ದೇ ಆರಾಧಕರು ಹಾಗೂ ಭೂತ ಪ್ರೇತಗಳ ಭಕ್ತಿಗೆ ಪಾತ್ರರಾದವರು. ಆ ಅವರ ಕರ್ತವ್ಯ ದೃಷ್ಟಿಯಿಂದ ಮಾತ್ರ ಹೃದಯದಲ್ಲಿ ಉಕ್ಕಿಬರುವ ನಗ ತೇಲಿಬರುವ ಸಂತೋಷ, ಮಮತೆ, ಕರುಣೆಯನ್ನು ಬದಿಗೊತ್ತಿ ನಾಸ್ತಿಕರ ನಟಿಸಬೇಕಾಗುತ್ತದೆ. ಅವರೂ ಆಸ್ತಿಕರೆಂಬುವುದಕ್ಕೆ ಸಾಕ್ಷೀ ಬೇಕೇ.?

ಮಂಗಳೂರಿನ ಕೇಂದ್ರ ಮೈದಾನು ಪ್ರದೇಶದ ಸಮೀಪದಲ್ಲಿರ ಪೋಲೀಸು ಬಂಧುಗಳ ವಸತಿಗೃಹಗಳ ಚತುರಂಗ ಕೋಟೆಯ ಮಧ್ಯದ ಎದ್ದು ಶೋಭಿಸುವ ಆಲದ ಮರದ ಆ ದೃಶ್ಯ! ಕಣ್ಮನಗಳಿಗೆ ಆಶ್ಚ ಚಕಿತವಾಗಿ ಮೈ ನಿಮಿರಿ ನಿಲ್ಲುವ ಆ...ಸನ್ನಿವೇಶ!



ಆಲದ ಗರ್ಭದ ಒಳನೋಟ ಮತ್ತು ಗೆಲ್ಲುಗಳ ಪವಿತ್ರ ಬಿಂದುವಿನಲ್ಲಿ ಹನುಮಂತನ ಪೀಠ



ಆಲದ ಮರದ ಬುಡದಲ್ಲಿ ಎದ್ದು ತೋರುವ ಗಣಪತಿ ಮೂರ್ತಿ ಮತ್ತು
ಮಾಣಿಕ್ಯವನ್ನು ಹೊತ್ತುನಿಂತ ನಾಗನ ಝೇಂಕಾರದ ಸೊಬಗು.

ಆತುರದಿಂದ ರಹಸ್ಯಮಯವಾದ ಆ..."ಆಲದ ಗರ್ಭ"ವನ್ನು ವೀಕ್ಷಿಸುವರೆ ನಮಗಾಗುವ ಆವೇಶ! ನಿಜವಾಗಿಯೂ ನೋಡಬೇಕಾದ ಸೊಬಗಿನ ಒಳನೋಟ. ಎಂದೂ ನೋಡಿರಲಾರೆವು. ಇನ್ನೆಂದೂ ನೋಡಸಿಗಲಾರದು.

ಸಮುದ್ರದ ಅಂತರಾಳದಲ್ಲಿ ಆಗರ್ಭ ಮುತ್ತುರತ್ನಗಳು. ಭೂಮಿಯ ಗರ್ಭದಲ್ಲಿ ನಿಧಿ ನಿಕ್ಷೇಪಗಳು. ಆದರೆ ಈ "ಆಲದ ಗರ್ಭದಲ್ಲೂ ... ...". ವೈವಿಧ್ಯಪೂರ್ಣವಾದ ಈ ಮರವು ಆಲ, ಅರಳಿ, ಗೋಳಿ, ಎಂಬೀ ಮರೆಗಳನ್ನು ಒಳಗೊಂಡಿದೆ. ಮರದಕಾಂಡ ಒಂದೇ ಆಗಿದ್ದರೂ, ತ್ರಿಕೋನ ಆಕೃತಿಯಿಂದ ಮೂರು ಕಡೆಗಳಲ್ಲೂ ಗೆಲ್ಲುಗಳು ಹಬ್ಬಿದ್ದು, ಮೂರು ಮರಗಳ ಮೂರು ತರದ ಎಲೆಗಳನ್ನು ಹೊಂದಿದ್ದು ವೈಚಿತ್ರಪೂರ್ಣವಾಗಿ ಜನರ ಮನಸ್ಸನ್ನು ಕುತೂಹಲಕಾರಿಯಾಗಿ ಪರಿಣಮಿಸುವ ಶಕ್ತಿ ಹೊಂದಿದೆ.

ಮರದ ಮೂರು ಗೆಲ್ಲುಗಳು ಮೂರು ಕಡೆಗಳಿಗೆ ಅಡ್ಡ ಚಲಿಸಿ ಕೇಂದ್ರದಲ್ಲಿ ಉಂಟಾದ ರಹಸ್ಯಮಯ ಪವಿತ್ರಬಿಂದುವಿನ ಸ್ಥಳದಲ್ಲಿ ಕರಿಕಲ್ಲಿನ ಹನುಮಂತನ ಪೀಠವಿದೆ. ಪೀಠದ ಮೇಲೆ ಶ್ರೀರಾಮಚಂದ್ರನ ಪಾದಗಳ ಆಕೃತಿ ಎದ್ದು ಕಾಣುತ್ತದೆ. ಆದುದರಿಂದ ಇತಿಹಾಸದ ಸಂಕೇತ ಇಲ್ಲೇ ಉದ್ಭವಿಸುತ್ತದೆ. ಶ್ರೀ ರಾಮಚಂದ್ರನು ಸೀತಾನ್ವೇಷಣೆಗೆಂದು ಈ ಪುಣ್ಯಭೂಮಿಯ ಮುಖಾಂತರ ಹಾದು ಹೋಗಿರುವುದು ಎಂಬುವುದಕ್ಕೆ ಹನುಮಂತನ ಪೀಠವೇ ಸಾಕ್ಷಿ, ಮರದ ಬುಡದಲ್ಲಿರುವ ಚೌಕಾಕಾರದ ಕಟ್ಟೆಯ ಸುತ್ತಲೂ ಹಗುರವಾಗಿ ಕಣ್ಣು ಹಾಯಿಸಿದರೆ ವಿಚಿತ್ರ ದೃಶ್ಯಗಳು ಕಣ್ಮನಗಳನ್ನು ಸೂರೆಗೊಳ್ಳುತ್ತವೆ. ಮರದ ಪವಿತ್ರ ಗರ್ಭದಿಂದ ಕಪ್ಪದಲ್ಲಿ ಶ್ರೀ ಗಣಪತಿಯು, ತನ್ನ ಸೊಂಡಿಲನ್ನು ಹೊರಕ್ಕೆ ಚಾಚಿ, ತನ್ನ ಭಕ್ತರ ಭಕ್ತಿಯನ್ನು ವೀಕ್ಷಿಸುವ ದೃಶ್ಯವು ತಾಯ ಗರ್ಭದಿಂದ ಮಗುವು ಜನನಕ್ಕೆ ಬರುವಂತೆ ಭಾಸವಾಗುತ್ತದೆ. ಈ ಪವಿತ್ರ ಗಣಪತಿ ಮೂರ್ತಿಯು ಉದ್ಭವವಾದಂತೆ ಕಾಣುತ್ತದೆ. ಈ ಮೂರ್ತಿ ಉದ್ಭವವಾದ ಕಾಲದಲ್ಲಿ ಬ್ರಾಹ್ಮಣ ನೋರ್ವನು ತೆಂಗಿನ ಸೋಗೆಯ ಮರೆಯನ್ನು ಮಾಡಿ, ಮೂರ್ತಿಗೆ ರುದ್ರಾ


ಭೀಷೇಕ ಮಾಡಿ, ಕಡಲೇ ನೈವೇದ್ಯಮಾಡಿ, ಪ್ರಸಾದವನ್ನು ಇತರ ಭಕ್ತರಿಗೂ
ಹಂಚುತ್ತಿದ್ದನು. ಇದರಿಂದ ಅಸೂಯೆ ಪಟ್ಟ ಮುಸಲ್ಮಾನನೊಬ್ಬನು ಗಣ
ಪತಿ ಮೂರ್ತಿಯ ಕಿರೀಟದ ಒಂದು ಬದಿಗೆ ಪೆಟ್ಟು ಕೊಟ್ಟನು. ಇದರಿಂದಾ
ಗಿ ಕಿರೀಟದ ಒಂದು ಬದಿಯ ಕೆತ್ತೆ ಹೋಗಿದ್ದು ಈಗಲೂ ಕಾಣಬಹುದು.
ಅಂದಿನಿಂದ ಉದ್ಭವ ಮೂರ್ತಿಯು ತನ್ನ ಬೆಳವಣಿಗೆಯನ್ನು ನಿಲ್ಲಿಸಿತು.
ಇದನ್ನು ತಿಳಿದ ಜನತೆ ಒಟ್ಟಾಗಿ ತಮ್ಮ ತಪ್ಪನ್ನು ಒಪ್ಪಿಕೊಂಡು ಕ್ಷಮೆ
ಯಾಚಿಸಿದರು. ಹಾಗಾಗಿ ಈ ಕ್ಷೇತ್ರದಲ್ಲಿ ಹಿಂದೂಗಳೊಂದಿಗೆ ಮುಸ್ಲಿಮರ
ಭಕ್ತಿಗೂ ಆಸ್ಪದವಿದೆ. ಈ ಮೂರ್ತಿಯ ಪಕ್ಕದಲ್ಲಿ ಇನ್ನೊಂದು ವಿಚಿತ್ರ … !
ಎರಡು ಜಡೆಯ ನಾಗನು ಮಾಣಿಕ್ಯವನ್ನು ಹೊತ್ತು ನಿಂತ ರೇಖಾಂಕಾರದ
ಸೊಬಗು, ಆಲದ ಗರ್ಭದಲ್ಲಿರುವ ಆಸ್ತಿಯನ್ನು ಕಾಪಾಡುವ ಜವಾಬ್ದಾರಿಯನ್ನು
ಹೊತ್ತಂತೆ ಕಾಣುವುದು.

ಹೆಚ್ಚು ಕಡಿಮೆ ಸಾವಿರಾರು ವರ್ಷಗಳ ಹಿಂದಿನ ಮರವೆಂದು ಊಹಿ
ಸುವಷ್ಟು ಆಯುಷ್ಯ ಕಂಡರೂ ದೇವರ ವಿಚಿತ್ರ ಪ್ರೇರಣೆಯಿಂದ ಮರವು
ತನ್ನ ಸ್ಥಾನದಲ್ಲೇ ಭದ್ರವಾಗಿ ನಿಂತಿದೆ. ಹಾಗೆಯೆ ಈ ಆಲದ ಹಿನ್ನೆಲೆ
ಯನ್ನು ಬಯಸುವಿರಾ … … ?

ಹೆಚ್ಚೇಂದರೆ ಬ್ರಿಟಿಷರ ಆಳ್ವಿಕೆಯ ಕಾಲ. ಅಂದರೆ ಟಿಪ್ಪುವು ಬ್ರಿಟಿಷ
ರೊಂದಿಗೆ ಮಂಗಳೂರು ಒಪ್ಪಂದ ಮಾಡಿಕೊಂಡ ಸಮಯ. (ಕ್ರಿ. ಶ
1924 ಇಸ್ವಿ) ಈ ಸ್ಥಳದಲ್ಲಿ ಟಿಪ್ಪು ಕಟ್ಟಿಸಿದಂತಹ ಕುದುರೆ ಲಾಯ
ಗಳು ಹಾಗೂ, ಸೈನಿಕರು ನಿಂತಿದ್ದ ವಸತಿ ಗೃಹಗಳು ಖಾಲಿಯಾಗಿ
ಹಾಳು ಬಿದ್ದಿದ್ದವು. ಆಸುಪಾಸಿನ ಜಮೀನು ರಣರಂಗವಾಯಿತು. ಸದ್ರಿ
ವಸತಿಗೃಹಗಳನ್ನು ಬ್ರಿಟಿಷರ ಕೈಕೆಳಗೆ ಕೆಲಸ ನಿರ್ವಹಿಸುವ ಪೋಲೀಸರು
ಅತಿಕ್ರಮಿಸಿಕೊಂಡು ತಮ್ಮ ಸಂಸಾರವನ್ನು ಕೂಡಿಕೊಂಡು ಠಾಣೆ ಹೂಡಿ
ದರು. ಆಗಿನ ಕಾಲದ ಪೋಲೀಸು ಬಂಧುಗಳು ಈ ಆಲದ ಮುಂದ ಕಟ್ಟೆ
ಯಲ್ಲಿ ಪ್ರತಿ ಶನಿವಾರ ಭಜನೆಗಳನ್ನು ಮಾಡಿ ದೈವ ದೇವರನ್ನು ಸಂತೋಷ



ಆಲದ ಗರ್ಭದಿಂದ ಉದ್ಭವವಾದ ಗಣಪತಿ ಮೂರ್ತಿಯ ದೃಶ್ಯ.




ತರಕಾರಿ ವ್ಯಾಪಾರಿ ಸಂಜೀವನವರ ಸೇವೆ. ಗುಳಿಗನ ಸ್ಥಾನ.

ಪಡಿಸಿ, ಭೂತ ಪ್ರೇತಗಳ ತೊಂದರೆಗೆ ಒಳಗಾಗದಂತೆ ಪ್ರಾರ್ಥಿಸಿಕೊಳ್ಳು ತ್ತಿದ್ದರು ಉತ್ಸವ ಕಾಲದಲ್ಲಿ ಕಟ್ಟೆಯು ಸುತ್ತಲೂ ತೆಂಗಿನ ಸೋಗೆಯ ಚಪ್ಪರಗಳನ್ನು ಹಾಕಿಕೊಂಡು ಆಡಂಬರದ ಪೂಜೆ ಪುರಸ್ಕಾರಗಳನ್ನು ನಡೆಸು ತ್ತಿದರು.

ಕಾಲವು......ಕಳೆದಂತೆ...... ಶ್ರಿ. ಯು ಆನಂದ ರಾವ್ ಎಂಬ ಒರ್ವ ಗಣ್ಯ ವ್ಯಕ್ತಿಗೆ ಸ್ವಪ್ನದಲ್ಲಿ "ಹಿಂದೆ ನಾನು ಈ ಸ್ಥಳದಲ್ಲೇ ತಪಸ್ಸು ಮಾಡಿ ಸಮಾಧಿಯಾಗಿರುತ್ತೇನೆ. ಆದುದರಿಂದ ನೀನು ಈ ಆಲದ ಮರದ ಪಾರ್ಶ್ವದಲ್ಲಿ ಒಂದು ಗುಡಿಯನ್ನು ಕಟ್ಟಿಸಿ ಕೊಡಬೇಕು. ಅಲ್ಲಿ ನಾನು ಉದ್ಭವವಾಗಿ ಬರುತ್ತೇನೆ." ಎಂದು ಶ್ರೀ ಮುನೀಶ್ವರ ಸ್ವಾಮಿಯ ಅಪ್ಪಣೆ ಯಾಯಿತಂತೆ. ಅದರಂತೆ 1928ರಲ್ಲಿ ಶ್ರೀ. ಯು. ಆನಂದ ರಾವ್ ಇವರು ಶ್ರೀ ಮುನೀಶ್ವರಾಶ್ರಮ ಎಂದು ಹೆಸರಿಟ್ಟು ಒಂದು ಗುಡಿಯನ್ನು ಆಲದ ಮರದ ಬಲಭಾಗದಲ್ಲೇ ಕಟ್ಟಿಸಿಕೊಟ್ಟರು. ಕ್ರಮೇಣ ಆ ಗುಡಿಯ ಗರ್ಭ ದಲ್ಲಿ ಒಂದು ಲಿಂಗವು ಇದ್ದಕ್ಕಿದ್ದಂತೆ ಉದ್ಭವಿಸಿತು. ಅಲ್ಲಿಯೇ ಮುನೀಶ್ವರ ಸ್ವಾಮಿಯ ಮೂರ್ತಿಯನ್ನು ಸ್ಥಾಪನೆ ಮಾಡಿದರು. 1935ನೆ ಇಸ್ವಿಯ ನಂತರ ಹಲವಾರು ಪೋಲಿಸು ಬಂಧುಗಳು ಒಟ್ಟಾಗಿ ಮುಂದಾಳುತನವನ್ನು ವಹಿಸಿಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ಎಲ್ಲಾ ಪೋಲಿಸರಿಂದ ಧನ ಸಂಗ್ರ ಹಿಸಿ ಹಿಂದೆ ಇದ್ದ ಗುಡಿಗೆ ತಾಗಿ ಕಟ್ಟಡವನ್ನು ಕಟ್ಟಿ ಸ್ಥಳಾವಕಾಶವನ್ನು ಜಾಸ್ತಿ ಮಾಡುತ್ತಾ ಅಭಿವೃದ್ಧಿ ಗೊಳಿಸುವುದರೊಂದಿಗೆ ಈ ಕ್ಷೇತ್ರದ ಏಳಿಗೆಗೆ ಈಗಿನ ಡಿವೈ. ಎಸ್ಪಿ. ಶ್ರೀ ಪುಷ್ಪರಾಜ್ ಶೆಟ್ಟಿ. ಮತ್ತು ಚನ್ನ ಪಟ್ನ ಪೋಲಿಸ್ ತರಬೇತಿ ಶಾಲೆಯ ಸಿ. ಡಿ. ಐ. ಶ್ರೀ. ಪ್ರಭಾಕರ್ ರಾವ್, ಇನ್ನೂ ಮೊದ ಲಾದವರು ಶ್ರಮಿಸಿದರು. ಕ್ರಮೇಣ 1964 ನೇ ಇಸ್ವಿಯಲ್ಲಿ ಇನ್ನೂ ಹೆಚ್ಚಿನ ಸ್ಥಳಾವಕಾಶದ ಬಗ್ಗೆ ಕಟ್ಟಡ ರಚಿಸಲು ಧನ ಸಂಗ್ರಹಿಸುವರೇ ಶ್ರೀ ಮುನೀಶ್ವರ ಮಹಾಗಣಪತಿ ಕೃಪಾಪೋಷಿತ ನಾಟಕ ಮಂಡಳಿಯು ಶ್ರೀ ಕ್ಷೇತ್ರದ ಏಳಿಗೆಗೆ ದುಡಿಯಿತು, 1973ನೇ ಇಸ್ವಿಯ ಅಂದಾಜಿಗೆ ಈ

ಆಲದ ಮರದ ಉದರದಿಂದ ಉರಿದ ಉದರಾಗ್ನಿಯ ಕಿಚ್ಚು ಶ್ರೀ ಕ್ಷೇತ
ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಭಕ್ತಿ ದೃಷ್ಟಿ
ಸಂಯೋಜನೆಗೊಂಡು ದೇವಸ್ಥಾನದ ಹಳೆಯ ಕಟ್ಟಡವನ್ನು ಸಂಪೂರ್ಣ
ನಾಶಗೊಳಿಸಿ ಹೊಸತೇ ಆದ ದೇವಾಲಯದ ನಿರ್ಮಾಣಕ್ಕೆ ನಾಂದಿಯಾಯಿತ
1974ನೇ ಇಸ್ವಿಯಲ್ಲಿ ಜಿಲ್ಲಾ ಪೋಲಿಸ್ ಅಧಿಕಾರಿ ಶ್ರೀ. ಆರ್. ಎಶ
ಚೋಪ್ರಾರ ಅಧ್ಯಕ್ಷತೆಯಲ್ಲಿ, ಶ್ರೀ ವೀರೇಂದ್ರ ಹೆಗ್ಡೆಯವರ ಧರ್ಮಾ
ಕಾರದ ಪವಿತ್ರ ಹಸ್ತದಿಂದ ನೂತನವಾಗಿ ರಚಿಸಿದ "ಶ್ರೀ ಮುನೀಶ್ವ
ಮಹಾಗಣಪತಿ" ದೇವಸ್ಥಾನದ ಪ್ರತಿಷ್ಠಾಪನೆಯಾಯಿತು. ಶ್ರೀ ಕಾರ್ಕ
ಶ್ಯಾಮರಾಯ ಆಚಾರ್ಯರವರ ಪುಣ್ಯ ಹಸ್ತದಿಂದ ರಚಿತವಾದ ಕರಿಕಲ್ಲಿ
ನೂತನ, ಪಾಣಿ ಪೀಠದಲ್ಲಿರಿಸುವಂತಹ ಗಣಪತಿ ವಿಗ್ರಹ ಪ್ರತಿಷ್ಠೆಯಾಯಿತು
ದೇವಾಲಯದ ಒಂದು ಪಾರ್ಶ್ವದಲ್ಲಿ ಗುಳಿಗನಕಲ್ಲು, ಇನ್ನೊಂದು ಪಾರ್ಶ್ವದ
ಲ್ಲಿ ಪಾಶಾಣ ಮೂರ್ತಿಯ ಕಲ್ಲು ಸ್ಥಾಪನೆಯಾಯಿತು. ಈ ಎರಡು ಕೆಲ
ವನ್ನೂ ಸೆಂಟ್ರಲ್ ಮಾರ್ಕೆಟಿನ ತರಕಾರಿ ವ್ಯಾಪಾರಿ ಸಂಜೀವ ಎಂಬವರ
ನೆರವೇರಿಸಿ ಕೊಟ್ಟರು. ಇದಾಗಲೇ ಇಷ್ಟೆಲ್ಲಾ ಶಕ್ತಿಗಳು ಈ ಆಲದ ಗರ್ಭ
ದಿಂದಲೇ ಉಕ್ಕಿ ಹೊರ ಹೊಮ್ಮಿದರೂ......ಹಿತ್ತಲ ಗಿಡ ಮದ್ದು ಅ
ಎಂಬ ಗಾದೆಯಂತೆ, ಇಂತಹ ಪುಣ್ಯ ಕ್ಷೇತ್ರದಲ್ಲಿ ರಾರಾಜಿಸುವ ಈ ಆಲದ
ಮರದ ಗರ್ಭದಲ್ಲಿ ಅಡಕವಾಗಿರುವ ಶಕ್ತಿ ಹೆಚ್ಚಿನವರಿಗೆ ಪವಿತ್ರವಾ
ಕಾಣುವುದಾದರೂ ಹೇಗೆ? ಅದೆಷ್ಟು ಶಕ್ತಿಗಳು ಆ "ಆಲದ ಗರ್ಭದಿಂ
ಹೊರ ಹೊಮ್ಮಲಿವೆಯೋ......? ಅದೆಷ್ಟು ನಿಧಿಗಳು ಗರ್ಭದಲ್ಲಿ ಶೇಖ
ವಾಗಲಿವೆಯೋ......? ದಕ್ಷಿಣ ಕನ್ನಡ ಜಿಲ್ಲಾ ಪೋಲಿಸು ಬಂಧುಗಳ
ಶ್ರೀ ಮುನೀಶ್ವರ ಮಹಾಗಣಪತಿಯ ಕೃಪೆಗೆ ಪಾತ್ರರಾಗುವುದರೊಂದಿ
ಊರ, ಪರವೂರ ಜನತೆಯ ಭಕ್ತಿ ಗೀತೆಗಳಿಗೆ ಆಶ್ರಯ ಕಲ್ಪಿಸಿ ಕೊಡ
ವಂತೆ ಶ್ರೀ ಕ್ಷೇತ್ರದ ಗರ್ಭದಿಂದ ಅದೆಷ್ಟು ಪ್ರೇರಣೆಯಾಗಿದೆಯೋ ಏನೊ ?



ಆಲದ ಮರದ ಪೂರ್ಣದೃಶ್ಯ. ಬುಡದಲ್ಲಿ ನೂತನ ನಾಗನ ಕಟ್ಟೆ ಮತ್ತು ಬಲಭಾಗದಲ್ಲಿ ಪಾಷಾಣಮೂರ್ತಿಯ ಸ್ಥಾನ.



ನೂತನ ರಚಿತ ದೇವಾಲಯದ ಪಾರ್ಶ್ವನೋಟ.

ಶ್ರೀ ಮುನೀಶ್ವರಾಶ್ರಮದ ಸ್ಥಾಪಕರು.



ಶ್ರೀ ಯು. ಆನಂದ್ ರಾವ್.

ಸ್ಥಾಪಕರ ಪರಿಚಯ

ಶ್ರೀ. ಯು. ಆನಂದರಾವ್ ಇವರು ಮಂಗಳೂರಿನಲ್ಲಿ ಹಿಂದೆ ಹೆಸರು ವಾಸಿಯಾಗಿದ್ದು ಇಂಪೀರಿಯಲ್ ಬ್ಯಾಂಕಿನಲ್ಲಿ ಅತೀ ಕೆಳಗಿನ ದರ್ಜೆಯ ನೌಕರರಾಗಿದ್ದರು. ಅವರಿಗೆ ಮುನೀಶ್ವರ ಮಹಾಗಣಪತಿಯ ಮೇಲೆ ಅಪಾರ ಭಕ್ತಿ. ಇದರಿಂದಾಗಿ ಅವರು ಪ್ರತಿ ಶನಿವಾರವು ಸದ್ರಿ ಕ್ಷೇತ್ರಕ್ಕೆ ಭಜನೆ, ಪೂಜೆ ಇತ್ಯಾದಿಗಳಿಗೆ ಸಂದರ್ಶನ ಕೊಡುವ ಹವ್ಯಾಸವನ್ನು ಇಟ್ಟು ಕೊಂಡಿದ್ದರು. ಅವರು ಮುನೀಶ್ವರನ ಮೇಲೆ ಇಟ್ಟ ಭಕ್ತಿಯಿಂದ ಇಂಪೀರಿ ಯಲ್ ಬ್ಯಾಂಕಿನ ಏಜೆಂಟ್ ಆಗಿ ನಿವೃತ್ತರಾದರು. ನಿವೃತ್ತರಾದ ಮೇಲೂ ಮುನೀಶ್ವರನ ಸೇವೆಯಲ್ಲಿಯೇ ತಲ್ಲೀನರಾಗುತ್ತಿದ್ದರು. ಹೆಚ್ಚು ಕಡಿಮೆ 1939ನೇ ಇಸ್ವಿಯ ಅಂದಾಜಿಗೆ ಅವರು ಅವರ ಭಕ್ತಿಯೊಂದಿಗೆ ಮುನೀಶ್ವ ರನ ಕ್ಷೇತ್ರವನ್ನು ತಲ್ಪಿದರು.



ವಿಶೇಷ ಹಬ್ಬಗಳು ಮತ್ತು ಉತ್ಸವಗಳು

ಹಿಂದೂ ಶಾಸ್ತ್ರದಂತೆ ಸಂವತ್ಸರದಲ್ಲಿ ಕಾಲಚಕ್ರದಂತೆ ಉರುಳುತ್ತಾ ಬರುವ ಎಲ್ಲಾ ಹಬ್ಬಗಳು ಈ ಕ್ಷೇತ್ರದಲ್ಲಿ ಆಚರಿಸಲ್ಪಟ್ಟರೂ ಶಿವರಾತ್ರಿ, ನವರಾತ್ರಿ ವಿನಾಯಕ ಚೌತಿ ಮಾತ್ರ ಈ ಕ್ಷೇತ್ರದ ವಿಜೃಂಭಣೆಯ ಉತ್ಸವ ಗಳಾಗಿರುತ್ತವೆ. ಶಿವರಾತ್ರಿ ಮತ್ತು ನವರಾತ್ರಿ ದಿನಗಳಲ್ಲಿ ಭಜನೆ ಪೂಜೆಗಳು ಜರಗುವುದರೊಂದಿಗೆ ನಗರ ಭಜನೆ ಕಾರ್ಯಕ್ರಮವು ಇರುವುದು.

ವಿನಾಯಕ ಚೌತಿ ಇಪ್ಪತ್ತೇಳು ಲಕ್ಷ ಗಣಗಳ ಅಧಿಪತಿಯ ಹಬ್ಬ ವಾಗಿರುತ್ತದೆ. ಆದುದರಿಂದ ಈ ಉತ್ಸವದಲ್ಲಿ ಜಿಲ್ಲೆಯ ವಿವಿಧ ಇಲಾಖೆಯ ಪ್ರಮುಖ ಅಧಿಕಾರಿಗಳು, ಊರ ಗಣ್ಯ ವ್ಯಕ್ತಿಗಳು ಪಾಲ್ಗೊಳ್ಳುತ್ತಾರೆ. ವಿನಾಯಕನ ಉತ್ಸವ ಮೂರ್ತಿಯನ್ನು ಮೆರವಣಿಗೆಯೊಂದಿಗೆ ಈ ಕ್ಷೇತ್ರದಲ್ಲಿ ತಂದಿರಿಸಿ, ಐದು ದಿವಸಗಳ ಕಾಲ, ಈ ಉತ್ಸವ ಮೂರ್ತಿಗೆ ಪೂಜೆ ಪುರ-ಸ್ಕಾರಗಳನ್ನು ಒಪ್ಪಿಸಿ, ಐದನೇ ದಿನ ರಾತ್ರಿ ಅಲಂಕೃತವಾದ ರಥದಲ್ಲಿ ಈ ಉತ್ಸವ ಮೂರ್ತಿಯನ್ನಿರಿಸಿ, ಇಡೀ ಮಂಗಳೂರು ನಗರದಲ್ಲೆಲ್ಲಾ ಪೋಲಿಸು ಗಣಪತಿ ಎಂದು ಪ್ರಚಲಿತವಿರುವಂತೆ ಪ್ರದಕ್ಷಿಣೆ ತಂದು ಆ ಮೇಲೆ ನೇತ್ರಾವತಿ ಹೊಳೆಯ ಗರ್ಭದಲ್ಲಿ ಅಡಗಿಸುವುದು. ಈ ಸಂದರ್ಭದಲ್ಲಿ ಚಂದ್ರನು ಕಾರ್ಮೋಡಗಳ ಮುಸುಕಿನಲ್ಲಿ ನಿಂತು ನಗುವ ದೃಶ್ಯ ಜನತೆಗೆ ಇಲ್ಲದ ಅಪವಾದ ಹೊರಿಸುವ ಸನ್ನಿವೇಶ. ಈ ಐದು ದಿನಗಳ ಉತ್ಸವದಲ್ಲಿ ಕೇರಳದ ಮಾರಾರ ಚೆಂಡೆಯ ಬಳಗದವರು ಭಾಗವಹಿಸುವುದು ಇನ್ನೂ ವಿಶೇಷ.

ಇಷ್ಟಾರ್ಥ ಸಿದ್ಧಿ

ಕಲ್ಪವೃಕ್ಷದ ಬುಡಕ್ಕೆ ಹೋಗಿ ಬೇಡಿದರೆ ಬೇಕಾದ್ದೆಲ್ಲವೂ ದೊರೆಯು ವುದೆಂಬ ಹೇಳಿಕೆಯಿದೆ. ಇದರ ಸತ್ಯಾಂಶವನ್ನು ತಿಳಿಯಬೇಕೆಂದಿರುವವರು ಶ್ರೀ ಮುನೀಶ್ವರ ಮಹಾಗಣಪತಿ ಎಂಬ ಎರಡು ಕಲ್ಪವೃಕ್ಷಗಳ ಬುಡಕ್ಕೆ ಹೋಗಿ ಈ ಮಾತಿನಲ್ಲಿ ಸತ್ಯಾಂಶವಿದೆಯೋ ಎಂದು ಪರೀಕ್ಷಿಸಿ ನೋಡು ವುದು ಒಳ್ಳೆಯದು. ದುರಂತ ಯಾತನೆಗಳಿಂದ ನರಳುತ್ತಿರುವ ಮತ್ತು ಜೀವಿತದಲ್ಲಿ ನಿರಾಶೆ ಹೊಂದಿದ ಹಲವರು ಇಲ್ಲಿಗೆ ಬಂದು ಭಜಿಸಿ, ಪೂಜಿಸಿ, ಇಷ್ಟಾರ್ಥ ಸಿದ್ಧಿಯನ್ನು ಹೊಂದಿರುವರು. ಅದರಲ್ಲಿ ಅನೇಕರು ಈ ಲೇಖ ಕನ ಪರಿಚಯದವರಾದರೂ ಅವರು ಜೀವಂತರಾಗಿರುವ ಕಾರಣ ಹೆಸರು ವಿವರಗಳನ್ನು ಎತ್ತಿ ಹೇಳುವುದಿಲ್ಲ. ಅದರಲ್ಲೂ ಈ ಕ್ಷೇತ್ರದ ಮಡಿಲಲ್ಲೇ ಜನಿಸಿ, ಈ ಕ್ಷೇತ್ರದ ಪೂಜೆ ಪುರಸ್ಕಾರಗಳಿಗೆ ಭಾಗಿಯಾಗಿ ಜೀವನ ಮಾಡಿ ಗೆಂದು ಈ ಕ್ಷೇತ್ರದಿಂದ ದೂರ ಹೋಗಿರುವ ಎಷ್ಟೋ ಮಹನೀಯರುಗಳು ಈಗ ಉದ್ಯೋಗದಲ್ಲಿ ಉತ್ತಮ ಸ್ಥಾನ ಬಡ್ತಿ ಹೊಂದಿದ್ದು ಉತ್ತಮ ಮಟ್ಟ ದಲ್ಲಿ ತಮ್ಮ ಜೀವನವನ್ನು ನಡೆಸಿಕೊಂಡು ವರ್ಷ ವರ್ಷವೂ ಗಣೇಶಚತುರ್ಥಿಗೆ ಬಂದು ತಮ್ಮ ಸೇವೆ, ಕಾಣಿಕೆಗಳನ್ನು ಭಕ್ತಿಯಿಂದ ಒಪ್ಪಿಸಿ ಹೋಗುತ್ತಾರೆ. ಇವರಲ್ಲಿ ವ್ಯಾಪಾರಿಗಳೂ, ಪಂಡಿತರು, ವಕೀಲರು, ಅಧ್ಯಾಪಕರು, ವೈದ್ಯರು, ಜ್ಯೋತಿಷಿಗಳು, ಸರಕಾರಿ ನೌಕರರು ಮುಂತಾದವರು ಸೇರಿದವರಾಗಿರುತ್ತಾರೆ.

ಐಹಿಕ ಮತ್ತು ಪಾರಮಾರ್ಥಿಕವಾದ ಶ್ರೇಯಸ್ಸಿಗೂ ಪ್ರೇಯಸ್ಸಿಗೂ ಸಾಕ್ಷಾತ್‌ಪರಾ ಶಕ್ತಿಯ ಉಪಾಸನೆಯು ಅತ್ಯಗತ್ಯವೆಂಬುದನ್ನು ಭಾರತೀಯ ಗ್ರಂಥಗಳು ಹೇಳುತ್ತವೆ. ಶ್ರೀಮನ್ನಾರಾಯಣನೇ ರಾಮನ ಅವತಾರವನ್ನೆತ್ತಿದಾಗ ರಾವಣನ ನಿಗ್ರಹಕ್ಕಾಗಿ ಪರಾಶಕ್ತಿಯ ಉಪಾಸನೆಯನ್ನು ಗೈದುದಾಗಿ ರಾಮಾಯಣದಲ್ಲಿಯೂ, ಕೃಷ್ಣಾವತಾರದಲ್ಲಿ ಗೋಪ ಸ್ತ್ರೀಯರು ಭಗವದ್ ದರ್ಶನಕ್ಕಾಗಿ "ಕಾತ್ಯಾಯನಿ ಮಹಾಮಾಯೆ"ಯನ್ನು ಅನನ್ಯ ಶರಣೆಯರಾಗಿ

ಉಪಾಸನೆ ಗೈದುದಾಗಿ ಭಾಗವತದಲ್ಲಿಯೂ ತೋರಿ ಬರುತ್ತದೆ. ಅಂತೆಯೇ ಯಾವುದೇ ಭಗವಂತನಿಗೆ ಪೂಜೆ ಪುರಸ್ಕಾರಗಳನ್ನು ಒಪ್ಪಿಸುವಮೊದಲು ಅಥವಾ ಯಾವುದೇ ಕೆಲಸವನ್ನು ಪ್ರಾರಂಭಿಸುವ ಆರಂಭದಲ್ಲಿ ವಿನಾಯಕನಿಗೆ ಭಕ್ತಿಯಿಂದ ಪೂಜೆ ಪುರಸ್ಕಾರಗಳನ್ನು ಈ ಕ್ಷೇತ್ರಕ್ಕೆ ಬಂದು ಭಕ್ತಿಯಿಂದ ಒಪ್ಪಿಸಿದಲ್ಲಿ ಇಷ್ಟಾರ್ಥ ಸಿದ್ಧಿಯಾಗುವುದು. ಸ್ನೇಹ ವಾತ್ಸಲ್ಯಗಳ ಮೂರ್ತಿಕರಣವಾದ ಮಾತೃ ಪಿತೃ ಭಾವವು ಒಬ್ಬ ಆರಾದಕನಿಗೆ ಎಷ್ಟು ಸರಳವೂ ಹೃದ್ಯವೂ ಆಗಿರುವ ಅನುಭವವನ್ನು ಕೊಡುತ್ತದೆಯೆಂಬುದನ್ನು, ಅದನ್ನು ಅನುಭವಿಸಿದವರೇ ಸಾರಲಿ! ಶ್ರೀವಃಣನೀಶ್ವರ ಮಹಾಗಣಪತಿಯು ಎಲ್ಲರನ್ನು ಆಶೀರ್ವದಿಸಲಿ! ಸುಃಖ ಸಂಪತ್ತು ಆಯುರಾರೋಗ್ಯ ಎದ್ಯೆ ಬುದ್ಧಿಯನ್ನು ಕೊಟ್ಟು ಭಕ್ತರನ್ನು ಉನ್ನತ ಮಾರ್ಗದತ್ತ ಕೊಂಡೊಯ್ಯಲಿ! "ಲೋಕಾಸ್ಸಮಸ್ತಾಃ ಸುಖಿನೋ ಭವಂತು"



ಶ್ರೀ ಮುನೀಶ್ವರ ಮಹಾಗಣಪತಿ ದೇವಸ್ಥಾನದ ಪೂಜಾದಿಗಳ ವಿವರ

ದಿನನಿತ್ಯ

ಬೆಳಿಗ್ಗೆ	6–30	ದೇವಸ್ಥಾನದ ಬಾಗಿಲು ತೆರೆಯುವುದು
	7–45	ಗಣಪತಿ ಮೂರ್ತಿಗೆ ಕಲಶ ಅಭಿಷೇಕ
	8–00	ಪೂಜೆ
ಸಾಯಂಕಾಲ	7–30	ದೇವಸ್ಥಾನದ ಬಾಗಿಲು ತೆರೆಯುವುದು
	8–00	ಪೂಜೆ

ವಿಶೇಷ ಪೂಜೆಗಳು: ಪ್ರತಿ ತಿಂಗಳ ಸಂಕ್ರಮಣದಂದು **ರಾತ್ರಿ 8–30ಕ್ಕೆ**
ನವರಾತ್ರಿ, ಶ್ರೀ ಕೃಷ್ಣಜನ್ಮಾಷ್ಟಮಿ, ಶಿವರಾತ್ರಿ ದಿನಗಳಲ್ಲಿ ಮತ್ತು ಗಣೇಶಚತುರ್ಥಿ ಉತ್ಸವದಲ್ಲಿ

ಗಣೇಶ ಚತುರ್ಥಿ ಉತ್ಸವ ದಿನಗಳಲ್ಲಿ ಜರಗುವ ಸೇವೆಗಳ ವಿವರ


1.	ಹೂವಿನ ಪೂಜೆ	ರೂ. 12–00
2.	ಅಪ್ಪದ ನೈವೇದ್ಯ	2–00
3.	ಚಕ್ಕುಲಿ ನೈವೇದ್ಯ	2–00
4.	ಹರಿವಾಣ ನೈವೇದ್ಯ	4–00
5.	ಕಡಲೆ ನೈವೇದ್ಯ	2–00
6.	ಹಣ್ಣುಕಾಯಿ	2–00
7.	ಪಂಚಕಜ್ಜಾಯ	1–00

ಶ್ರೀ ಕ್ಷೇತ್ರದ ಅಭಿವೃದ್ಧಿ ಕಾರ್ಯಕ್ರಮಗಳು

ಪುಣ್ಯ ಕ್ಷೇತ್ರವಾದ ಶ್ರೀ ಮುನೀಶ್ವರ ಮಹಾಗಣಪತಿಯ ಸನ್ನಿಧಿಯಲ್ಲಿ ಭಕ್ತಾದಿಗಳು ಬಹು ಸಂಖ್ಯೆಯಲ್ಲಿ ಬಂದು ಸೇವೆಗಳನ್ನು ಸಲ್ಲಿಸಿ, ದೇವರ ಕೃಪೆಗೆ ಪಾತ್ರರಾಗುತ್ತಾರೆ. ಆದುದರಿಂದ ಭಕ್ತರಿಗೆ ಬೇಕಾದ ಸೌಲಭ್ಯ ಮತ್ತು ಪೂಜೆ ಪುರಸ್ಕಾರಗಳಲ್ಲಿ ಒಂದು ಕ್ರಮಬದ್ಧ ರೀತಿಯನ್ನು ಏರ್ಪಡಿಸುವ ಸಲುವಾಗಿ ಪ್ರತಿ ವರ್ಷವೂ ಭಕ್ತರಿಂದ ಆರಿಸಲ್ಪಡುವ ಮೊಕ್ತೇಸರ ಮಂಡಳಿಯು ಈ ದೇವಳದ ಆಡಳಿತ ಜವಾಬ್ದಾರಿಯನ್ನು ಹೊತ್ತಿರುತ್ತದೆ. ಈ ದೇವಾಲಯಕ್ಕೆ ಸಂಬಂಧಿಸಿದ ಉಂಬಳಿ ಜಮೀನುಗಳು. ಯಾವುದು ಇಲ್ಲವೆ ಇದ್ದು, ಭಕ್ತರ ಧನ ಸಹಾಯದಿಂದಲೇ ದೈನಂದಿನ ವಿನಿಯೋಗಾದಿಗಳಿಗೆ ವ್ಯಯಿಸಬೇಕಾಗುತ್ತದೆ. ಈಗಾಗಲೇ ಊರ ಮಹನೀಯರುಗಳು ಮತ್ತು ಪರವೂರ ಭಕ್ತರು ಕೊಟ್ಟಂತಹ ಧನ ಸಹಾಯದಿಂದಲೂ, ಹಾಗೂ ಕೆಲವು ಮಹನೀಯರುಗಳು ತಮ್ಮ ಸ್ವಂತ ಇಚ್ಛೆಯಿಂದಲೇ ದೇವಾಲಯದ ಅಭಿವೃದ್ಧಿ ಕಾರ್ಯದಲ್ಲಿ ಪಾಲ್ಗೊಂಡು ಶ್ರೀ ಮುನೀಶ್ವರ ಮಹಾಗಣಪತಿಯ ಕೃಪೆಗೆ ಪಾತ್ರರಾಗಿದ್ದಾರೆ.

ಸದ್ರಿ ದೇವಾಲಯದ ಮೊಕ್ತೇಸರ ಮಂಡಳಿಯಲ್ಲಿರುವ ಮೊಕ್ತೇಸರರ ಪ್ರೋತ್ಸಾಹ ಬಂಧುಗಳಾಗಿದ್ದು, ಈ ಕ್ಷೇತ್ರದ ಅಭಿವೃದ್ಧಿ ಬಗ್ಗೆ ಸದಾ ಚಿಂತಿಸುತ್ತಾರೆ.

ಗಣೇಶ ಚತುರ್ಥಿ ಉತ್ಸವ ದಿನಗಳಲ್ಲಿ ಮಳೆಯು ಬಂದು, ಭಕ್ತರು ತೊಂದರೆಗೆ ಒಳಗಾಗದಂತೆ ಸಾರ್ವಜನಿಕ ಸಭಾಂಗಣವನ್ನು ಕಟ್ಟಿಸ ಬೇಕೆಂದು ಈ ಮಂಡಳಿಯು ನಿರ್ಣಯಿಸಿದೆ. ಅಲ್ಲದೆ ದೇವಾಲಯದ ಸುತ್ತಲೂ ಪಡ



ಶ್ರೀ ಮುನೀಶ್ವರ ಮಹಾಗಣಪತಿ ಕ್ಷೇತ್ರದ ಅಭಿವೃದ್ಧಿಗಾಗಿ ಈತನಕವೂ
ದುಡಿಯುತ್ತಿರುವ ದಕ್ಷ ಪೋಲೀಸು ಆಧಿಕಾರಿ ಹಾಗೂ
ಜನಪರಿಚಿತ ಗಣ್ಯವ್ಯಕ್ತಿ.

ಶ್ರೀ ಬಿ. ಪುಷ್ಪರಾಜ ಶೆಟ್ಟಿ, ಡಿವೈ. ಎಸ್. ಪಿ. ಮಂಗಳೂರು.

ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷರಾಗಿ ದುಡಿದವರು.



ಶ್ರೀ ಕೆ. ಎಂ. ಉತ್ತಯ್ಯ



ಶ್ರೀ ಕೃಷ್ಣರಾವ್.


ಸಾಲೆಗಳನ್ನು ಕಟ್ಟಿಸಬೇಕೆಂಬ ಗುರಿಯನ್ನು ಇಟ್ಟುಕೊಂಡಿದೆ. ದೇವಾಲಯದ ವಠಾರದ ಅಂಗಳಕ್ಕೆ ಕಲ್ಲು ಹಾಸಿ ನೆಲವನ್ನು ಸಮತಟ್ಟಾಗಿ ಇರಿಸಬೇಕೆಂದು ಚಿಂತಿಸಿದೆ. ಆದರೆ ಈ ಎಲ್ಲಾ ಅಭಿವೃದ್ಧಿ ಕೆಲಸಗಳಿಗೆ ಹೇರಳ ಹಣ ಬೇಕಾಗಿರುವುದರಿಂದ ಈ ಕ್ಷೇತ್ರಕ್ಕೆ ಬರುವ ಭಕ್ತಾದಿಗಳು ಅಭಿವೃದ್ಧಿ ಯೋಜನೆಯಲ್ಲಿ ಆಸಕ್ತಿ ತಾಳಿ ನೆರವಾದಲ್ಲಿ ಉತ್ತಮವಾಗುತ್ತಿತ್ತು. ಅಥವಾ ಯಾರಾದರು ಭಕ್ತ ಮಹಾಶಯರು ತಮ್ಮ ಸ್ವಂತ ಇಚ್ಛೆಯಿಂದ ಯಾವುದೇ ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಿ ಕೊಡುವುದಾದರೆ, ಈ ದೇವಾಲಯದ ಮೊಕ್ತೇಸರ ಮಂಡಳಿಯು ಅವರ ಆಶೆಯನ್ನು ಪೂರೈಸಿ ಕೊಡುವುದರಲ್ಲಿ ಸಹಕರಿಸುವುದು. ಅಂತಹವರ ಶ್ರೇಯಸ್ಸಿಗೆ ಶ್ರೀ ಮಾನೀಶ್ವರ ಮಹಾಗಣಪತಿಯು ಆಶೀರ್ವದಿಸಲಿ ಎಂದು ಸದಾ ಪ್ರಾರ್ಥಿಸುತ್ತೇವೆ.

ಕೃತಜ್ಞತೆಗಳು

ಶ್ರೀ ಮುನೀಶ್ವರ ಮಹಾಗಣಪತಿ ದೇವಾಲಯದ ನೂತನ
ವನ್ನು ಭಕ್ತಿಯಿಂದಲೂ ಪ್ರೀತಿಯಿಂದಲೂ, ತನ್ನದೆ ಕರ್ತವ್ಯವೆಂದು ಭ
ತುಂಬು ಮನಸ್ಸಿನಿಂದ ಕಟ್ಟಿಸಿ ಶ್ರೀ ಮುನೀಶ್ವರ ಮಹಾಗಣಪತಿಯ
ರಿಗೆ ಆಶ್ರಯ ಕಲ್ಪಿಸಿ ಕೊಟ್ಟ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾ
ಶ್ರೀ ವೀರೇಂದ್ರ ಹೆಗ್ಗಡೆಯವರಿಗೆ ಪೋಲೀಸ ಬಂಧುಗಳು ಊರ ಜನತೆ
ಚಿರಋಣಿ.

ಶ್ರೀ ಕ್ಷೇತ್ರದ ಏಳಿಗೆಗೆ ದುಡಿದ ವ್ಯಕ್ತಿಗಳಿಗೂ, ಭಕ್ತರಿಗೂ,
ತನುಮನಧನಗಳಿಂದ ಸಹಕರಿಸಿದ ಮಹನೀಯರುಗಳಿಗೂ ಪೋಲೀಸು ಬಂ
ಪರವಾಗಿ ಈ ಲೇಖಕನ ವೈಯಕ್ತಿಕ ಕೃತಜ್ಞತೆಗಳು.





ಎರಡು ಮಾತು ....

ಚಿಕ್ಕಂದಿನಿಂದಲೂ ಲೇಖನ, ಕಥೆ, ಕವಿತೆಗಳನ್ನು ಹಾಗೂ ನಾಟಕಗಳನ್ನು ಬರೆಯುವ ಹವ್ಯಾಸ ಇಟ್ಟುಕೊಂಡ ನನ್ನ ಶ್ರೀ ಮುನೀಶ್ವರ ಮಹಾ ಗಣಪತಿ ದೇವಸ್ಥಾನದ ಮಹಿಮೆಯನ್ನು ವರ್ಣಿಸುವರೇ ಒಂದು ಪುಸ್ತಕ ರಚಿಸಬೇಕೆಂದು ತುಂಬಾ ಆಶೆ ಇಟ್ಟುಕೊಂಡಿದ್ದೆ. ಅದಕ್ಕೆ ಇಂದು ದಿನ ಕೂಡಿ ಬಂತು. ನಾಟಕಗಳಲ್ಲೂ ಅಭಿನಯಿಸುವಾಗ ನನ್ನ ಮಿತ್ರರು ನೀನು ಮುಂದೆ ದೊಡ್ಡ ಕಲಾವಿದ ಆಗಲು ಸಾಧ್ಯತೆ ಇದೆಯಂತಹ ಬೆನ್ನುತಟ್ಟುತ್ತಿದ್ದರು. ನಾನು ಆ ಮಾತನ್ನು ತಲೆಗೆ ಹಚ್ಚಿಕೊಳ್ಳುತ್ತಿರಲಿಲ್ಲ. ಕವಿತೆ, ಲೇಖನ, ಮುಂತಾದ ಕಲೆಗಳಲ್ಲಿದ್ದ ಆಸಕ್ತಿಯಿಂದ ನಾನೀಗ ಶ್ರೀ ಮುನೀಶ್ವರ ಮಹಾ ಗಣಪತಿಯ ಇತಿಹಾಸವನ್ನು ಹಿರಿಯರಿಂದಲೂ, ಹಾಗೂ ಪುರಾತನ ಕೆಲವು ದಾಖಲೆಗಳ ಆಧಾರದಿಂದ ರಚಿಸಿರುತ್ತೇನೆ. ಈ ಕ್ಷೇತ್ರ ಮಹಿಮೆಯನ್ನು ರಚಿಸುವರೆ ನನ್ನೊಂದಿಗೆ ಸಹಕರಿಸಿದ ಶ್ರೀ ಎ. ಜಿ. ಅಲ್ಸೆಯವರಿಗೆ ಮತ್ತು ಪೋಟೋಗಳನ್ನು ಪ್ರಕಟಿಸುವರೆ ನನ್ನೊಂದಿಗೆ ಸಹಕರಿಸಿದ ಬಸಂತ್ ಸ್ಟುಡಿಯೊ ಮಾಲಕರಾದ ಶ್ರೀ ರಾಮಚಂದ್ರರಿಗೆ ನನ್ನ ನೆನಕೆಗಳು ಸಲ್ಲಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಈ ಕೃತಿಯನ್ನು ಬಿಡುಗಡೆಗೊಳಿಸುವರೆ ಧನ ಸಹಾಯದೊಂದಿಗೆ ನುಡಿಮುತ್ತುಗಳನ್ನು ಜೋಡಿಸಿ ಸಹಕರಿಸಿದ ಶ್ರೀ ಕ್ಷೇತ್ರ ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗ್ಗಡೆಯವರಿಗೆ ನಾನು ಚಿರಋಣಿ

ಕೆ. ಆರ್. ನಾಥ್.

ಶ್ರೀ ಮುನೀಶ್ವರ ಮಹಾಗಣಪತಿ ಮಹಿಮೆ

ಹಾರೈಕೆ

ತರುಣೋತ್ಸಾಹಿ ಶ್ರೀ ಕೆ. ಆರ್ ನಾಥ್‌ರದು ಸದಾ ಹೊಸತನ್ನು ಅನ್ವೇಷಿಸುವ ಸ್ವಭಾವ. ಇವಕ್ಕೆ ಪೂರಕವಾಗಿಯೆಂಬಂತೆ ಸಾಹಿತ್ಯರಂಗಕ್ಕೆ ಇವರು ಕಾಲಿಟ್ಟಿದ್ದಾರೆ. ಈ ಕೃತಿಯ ಮೂಲಕ.

ಈಗಾಗಲೇ ಹಲವಾರು ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದು ಸಾರಸ್ವತ ಲೋಕಕ್ಕೆ ಪೂರ್ವ ಪರಿಚಿತರಾದ ಇವರು ಮುಂದೆಯೂ ಈ ರಂಗದಲ್ಲಿ ಸೇವೆ ಸಲ್ಲಿಸುವ ಬಯಕೆ ಹೊಂದಿದ್ದಾರೆ.

ಶ್ರೀ ಕ್ಷೇತ್ರ ಧರ್ಮಸ್ಥಳದ ಪೂಜ್ಯ ಧರ್ಮಾಧಿಕಾರಿ ಶ್ರೀ ವೀರೇಂದ್ರ ಹೆಗ್ಗಡೆಯವರ ಆಶೀರ್ವಾದ ಅನುಗ್ರಹದ ಮೇಲೆ ಬೆಳಕು ಕಂಡ ಈ ಕೃತಿ ಇವರ ಸಾಹಿತ್ಯ ರಂಗಕ್ಕೂ ಹೊಸ ಬೆಳಕು ತೋರಲೆಂದು ಹಾರೈಸುವೆ.

ಕು। ಶಕಿಲಾ, ಬಿ. ಎ;
ಮೆ। ಶಕಿಲಾ ಮೆಟಲ್ ಇಂಡಸ್ಟ್ರೀಸ್,
ಮುಂಬಯಿ.

ವಿಜಯಾ ಪ್ರಿಂಟರ್ಸ್, ಕುಂದಾಪುರ.